**ಸಿ.ಸಿ.ನಂ.: 1114/2024**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **03-03-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು – ಆರೋಪಿ ಪರ ಶ್ರೀ. ವಿ.ಜಿ.ಎನ್. ವಕೀಲರಿಂದ**

1. ನಾನು ಬೇರೆ ಬೇರೆ ಪ್ರಕರಣಗಳಲ್ಲಿ ಫಿರ್ಯಾದಿ ಸಂಸ್ಥೆಯ ಪರವಾಗಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಸಾಲ ನೀಡುವ ಪೂರ್ವದಲ್ಲಿ ನಮ್ಮ ಆಡಳಿತ ಮಂಡಳಿಯ ಸಭೆಯಲ್ಲಿ ಸಾಲ ಮಂಜೂರಾದ ನಂತರ ಸಾಲವನ್ನು ನೀಡುತ್ತೇವೆ. ಆರೋಪಿತಳಿಗೆ ನಾವು ಆಕೆಯ ಟೇಲರಿಂಗ್ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಾಲವನ್ನು ನೀಡುತ್ತೇವೆ. ಆರೋಪಿತಳು ಟೇಲರಿಂಗ್ ವೃತ್ತಿಯನ್ನು ಮಾಡುತ್ತಿರುವ ಕುರಿತಾಗಿ ಯಾವುದೇ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ.

2. ಆರೋಪಿತಳು ಪಡೆದ ಸಾಲಕ್ಕೆ 3 ಜನ ಜಾಮೀನುದಾರ ಇರುತ್ತಾರೆ. ಜಾಮೀನು ತೆಗೆದುಕೊಳ್ಳುವ ಪೂರ್ವದಲ್ಲಿ ಅವರ ಆರ್ಥಿಕ ಸಾಮರ್ಥದ ಕುರಿತಾಗಿ ತಿಳಿದುಕೊಳ್ಳುತ್ತೇವೆ. ಈ ಪ್ರಕರಣದಲ್ಲಿಯೂ ಸಹ ನಾವು ಆರ್ಥಿಕ ಸಾಮರ್ಥದ ಕುರಿತಾಗಿ ನಾವು ತಿಳಿದುಕೊಂಡಿರುತ್ತೇವೆ. 3ನೇ ಜಾಮೀನುದಾರರಿಂದ ಅವರ ಆರ್ಥಿಕ ಸಾಮರ್ಥಕ್ಕೆ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. 2ನೇ ಜಾಮೀನುದಾರರು ಆರೋಪಿತಳ ಗಂಡ ಎಂದರೆ ಸರಿ. 2ನೇ ಜಾಮೀನುದಾರವರಿಂದ ಕೂಡ ಅವರ ಆರ್ಥಿಕ ಸಾಮರ್ಥಕ್ಕೆ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ.

3. ಈ ಪ್ರಕರಣದ ಸಾಲವನ್ನು ಆರೋಪಿತಳಿಗೆ ನಗದು ರೂಪದಲ್ಲಿ ನೀಡಿರುತ್ತೇವೆ. ಆರೋಪಿತಳು ಪಡೆದುಕೊಂಡಿರುವ ಸಾಲದ ಹಣವಾದ 75 ಸಾವಿರವನ್ನು ನಗದಾಗಿ ನೀಡಿರುತ್ತೇವೆ. ಆರೋಪಿತಳು

ಕೇವಲ 75 ಸಾವಿರ ಸಾಲವನ್ನು ಪಡೆದುಕೊಂಡಿದ್ದು, ಸಾಲದ ಮರು ಪಾವತಿಗಾಗಿ ಆಕೆಯು 14 ತಿಂಗಳ ನಂತರದಲ್ಲಿ ನಿಪಿ2 ನ್ನು ನೀಡಿರುತ್ತಾಳೆ. ನಿಪಿ2 ರಲ್ಲಿ 91,883-00 ಹಣ ನಮೂದಾಗಿದೆ ಎಂದರೆ ಸರಿ. ಆರೋಪಿತಳು ಪ್ರತಿಶತ 16 ಬಡ್ಡಿಗೆ ಸಾಲವನ್ನು ಪಡೆದುಕೊಂಡಿರುತ್ತಾರೆ. ಆರೋಪಿತಳ ಸಾಲಕ್ಕೆ 14 ತಿಂಗಳಿಗೆ ರೂ.16883-00 ಬಡ್ಡಿಯಾಗುತ್ತದೆ ಎಂದರೆ ಸರಿ.

4. ನಿಪಿ2 ರ ಎಲ್ಲಾ ಬರವಣಿಗೆಗಳನ್ನು ಆರೋಪಿತಳು ಮಾಡಿರುತ್ತಾರೆ. ನಿಪಿ2 ರ ಬರವಣಿಗೆ ಶಾಹಿ ಹಾಗೂ ನಿಪಿ2ಎ ಯ ಶಾಹಿ ಬೇರೆ ಬೇರೆ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ2 ನ್ನು ಆರೋಪಿತಳು ನಮ್ಮ ಬ್ಯಾಂಕಿನಲ್ಲಿ ಬರೆದಿರುತ್ತಾರೆ.

5. ಆರೋಪಿತರು ಸಾಲವನ್ನು ಪಡೆದ ನಂತರದಲ್ಲಿ ಯಾವುದೇ ಹಣವನ್ನು ಮರು ಪಾವತಿ ಮಾಡಿರುವುದಿಲ್ಲ. ನಿಪಿ2 ರಲ್ಲಿರುವ ಆಂಗ್ಲ ಭಾಷೆಯು ಆರೋಪಿತಳಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ2 ರಲ್ಲಿರುವ ಬರವಣಿಗೆಯ ಶಾಹಿ ಹಾಗೂ ನಿಪಿ2ಎ ಯ ಶಾಹಿಯು ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ಆರೋಪಿತಳು ಈ ಮೊದಲು ಪಡೆದುಕೊಂಡ ಸಾಲ ಮರು ಪಾವತಿ ಆಗಿದ್ದರೂ ಸಹ ಆಕೆಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

**ಸಿ.ಸಿ.ನಂ.: 1114/2024**

ಪಿ.ಡಬ್ಲ್ಯೂ: 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ